ಧಾರ್ಮಿಕ ಆಚರಣೆಗಳು

❁ ಯಾರಿಗೆ ಭಗವಂತನ ಸಾಕ್ಷಾತ್ಕಾರ ದೊರೆತಿದೆಯೋ ಆತನಿಗೆ ಸಂಧ್ಯಾವಂದನಾದಿ ಕರ್ಮಗಳು ಇರುವುದಿಲ್ಲ. ಆತನ ವಿಷಯದಲ್ಲಿ ಸಂಧ್ಯಾವಂದನೆ ಗಾಯತ್ರಿಯಲ್ಲಿ ಲೀನವಾಗುತ್ತದೆ. ಅದು ಹಾಗಾದಾಗ ಗಾಯತ್ರಿಯನ್ನು ಜಪಿಸಿದರೇ ಬೇಕಾದಷ್ಟು. ಬಳಿಕ ಗಾಯತ್ರಿ ಓಂಕಾರದಲ್ಲಿ ಲಯವಾಗುತ್ತದೆ. ಅದಾದನಂತರ ಗಾಯತ್ರಿಯನ್ನು ಜಪಿಸಬೇಕಾದ ಆವಶ್ಯಕತೆಯೇನಿರುವುದಿಲ್ಲ ; ಆಗ ಕೇವಲ ''ಓಂ'' ಎಂದು ಜಪಿಸುತ್ತಿದ್ದರೇ ಸಾಕು. ಸಂಧ್ಯಾವಂದನಾದಿ ಕರ್ಮಗಳು ಎಲ್ಲಿಯವರೆಗೆ? ಹರಿನಾಮ ಅಥವಾ ರಾಮನಾಮೋಚ್ಚಾರಣೆಯಿಂದ ಪುಲಕವುಂಟಾಗುವುದಿಲ್ಲವೋ, ಪ್ರೇಮಾಶ್ರು ಸುರಿಯುವುದಿಲ್ಲವೋ ಅಲ್ಲಿಯವರೆಗೆ. ಜನ ಹಣಕಾಸುಗಳಿಗಾಗಿ, ವ್ಯಾಜ್ಯ ಗೆಲ್ಲುವುದಕ್ಕಾಗಿ, ಪೂಜಾದಿ ಕರ್ಮಗಳಲ್ಲಿ ತೊಡಗುತ್ತಾರೆ. ಇದು ಒಳ್ಳೆಯದಲ್ಲ.

❁ ಪ್ರತಿಮಾಪೂಜೆ ಮಾಡುವುದರಲ್ಲಿ ತಪ್ಪೇನಿದೆ? 'ಎಲ್ಲಿ ಅಸ್ತಿ, ಭಾತಿ, ಪ್ರಿಯ ಇರುವುವೊ, ಅಲ್ಲೇ ಭಗವಂತನ ವ್ಯಕ್ತತೆಯೂ ಇದೆ ' ಎಂದು ವೇದಾಂತ ಹೇಳುತ್ತದೆ, ಆದ್ದರಿಂದ ಬ್ರಹ್ಮನಿಲ್ಲದ ವಸ್ತುವೇ ಇಲ್ಲ.

ಚಿಕ್ಕ ಹುಡುಗಿಯರು ಎಲ್ಲಿಯವರೆಗೆ ತಮ್ಮ ಗೊಂಬೆಗಳೊಡನೆ ಆಟವಾಡುತ್ತಾರೆ? ವಿವಾಹವಾಗುವವರೆಗೆ ಮತ್ತು ತಮ್ಮ ತಮ್ಮ ಪತಿಯರೊಡನೆ ವಾಸಿಸುವವರೆಗೆ. ವಿವಾಹವಾದ ನಂತರ ಅವರು ಗೊಂಬೆಗಳನ್ನು ಪೆಟ್ಟಿಗೆಯಲ್ಲಿ ಹಾಕಿ ಇಡುತ್ತಾರೆ. ಭಗವಂತನ ಸಾಕ್ಷಾತ್ಕಾರ ದೊರೆತನಂತರ ಪ್ರತಿಮಾಪೂಜೆಯ ಆವಶ್ಯಕತೆ ಎಲ್ಲಿರುತ್ತದೆ?

❁ ಯಾರಿಗೆ ಸಮಯವಿರುವುದೊ, ಅವರು ಧ್ಯಾನ ಭಜನೆ ಮಾಡಲೇಬೇಕು. ಆದರೆ ಯಾರಿಗೆ ಸಮಯವಿಲ್ಲವೊ ಅವರು ದಿನಕ್ಕೆ ಎರಡು ವೇಳೆ ಹೃತ್ಪೂರ್ವಕವಾಗಿ ಭಗವಂತನಿಗೆ ನಮಸ್ಕಾರ ಹಾಕಲಿ. ಆತ ಅಂತರ್ಯಾಮಿ. ಆತನಿಗೆ ಗೊತ್ತಿದೆ. ಇವರು ಇನ್ನೇನು ತಾನೆ ಮಾಡಿಯಾರು, ಇವರಿಗೆ ಬೇಕಾದಷ್ಟು ಕೆಲಸ ಕಾರ್ಯಗಳಿವೆಯಲ್ಲ, ಪಾಪ ಎಂದು. ಆತನನ್ನು ಪ್ರಾರ್ಥಿಸಲು ನಿಮಗೆ ಸಮಯವಿಲ್ಲ; ಆದ್ದರಿಂದ ಆತನಿಗೆ ನಿಮ್ಮ ವಕಾಲತ್ತನ್ನು ವಹಿಸಿಬಿಡಿ. ಆದರೆ ನೋಡಿಕೊಳ್ಳಿ. ಆತನ ಸಾಕ್ಷಾತ್ಕಾರವನ್ನು ಪಡೆದುಕೊಳ್ಳದೆ ಹೋದಿರಿ ಎಂದರೆ, ಆತನ ದರ್ಶನವನ್ನು ಮಾಡಿಕೊಳ್ಳದೆ ಹೋದಿರಿ ಎಂದರೆ, ಜೀವನ ಬರಿದೆ ವ್ಯರ್ಥವಾದಂತೆ.

❁ ಹೆಸರೇನು ಕಡಮೆಯಾದುದೆ? ಭಗವಂತನಿಗೂ ಆತನ ಹೆಸರಿಗೂ ವ್ಯತ್ಯಾಸವೇನಿಲ್ಲ. ಸತ್ಯಭಾಮೆ ಚಿನ್ನ, ರತ್ನ, ಮಾಣಿಕ್ಯ ಇವುಗಳಿಂದ ಶ್ರೀಕೃಷ್ಣನನ್ನು ತುಲಾಯಂತ್ರದಲ್ಲಿ ತೂಗಲು ಪ್ರಯತ್ನಮಾಡಿದಾಗ ಆಕೆ ತಕ್ಕಡಿ ತಟ್ಟೆಗಳನ್ನು ಒಂದು ಸಮತೂಕಕ್ಕೆ ತರಲಾಗಲಿಲ್ಲ. ಆಗ ರುಕ್ಮಿಣಿ ತುಳಸಿ ಎಲೆಯ ಮೇಲೆ ಕೃಷ್ಣನ ಹೆಸರನ್ನು ಬರೆದು ತೂಕದ ತಟ್ಟೆಗೆ ಹಾಕಿದಳು. ಒಡನೆ ತೂಕ ಸರಿಹೋಗಿಬಿಟ್ಟಿತು.

❁ ಮೊದಲು ತಪಸ್ಸು ಮಾಡಬೇಕು. ಆ ಬಳಿಕವೇ ಭಗವಂತನ ಸಾಕ್ಷಾತ್ಕಾರ. ಶಾಸ್ತ್ರಗಳ ಶ್ಲೋಕಗಳನ್ನೆಲ್ಲ ಕಂಠಪಾಠ ಮಾಡಿಕೊಂಡರೂ ಏನೂ ದೊರೆಯದು.

❁ ಮನಸ್ಸೆಂಬುದು ಅಗಸನ ಮನೆಯ ಬಟ್ಟೆಯ ಹಾಗೆ. ಅದನ್ನು ಯಾವ ಬಣ್ಣದಲ್ಲಿ ಅದ್ದುತ್ತೇವೆಯೋ, ಅದಕ್ಕೆ ಆ ಬಣ್ಣ ಬಂದುಬಿಡುತ್ತದೆ... ಮೊದಲು ಚಿತ್ತಶುದ್ಧಿ ಆಗಬೇಕು. ಬಳಿಕ ಅದನ್ನು ಭಗವಂತನ ಕಡೆಗೆ ತಿರುಗಿಸಿದರೆ ಅದಕ್ಕೆ ಭಗವಂತನ ಬಣ್ಣ ಹತ್ತಿಕೊಂಡುಬಿಡುತ್ತದೆ. ಹಾಗೆ ಮಾಡುವುದನ್ನು ಬಿಟ್ಟು ಅದನ್ನು ಸಂಸಾರದ ಕಡೆಗೆ, ನಾಟ್ಯದ ಕಡೆಗೆ ತಿರುಗಿಸಿದರೆ ಅದಕ್ಕೆ ಆ ಬಣ್ಣ ಬಂದುಬಿಡುತ್ತದೆ.

❁ ಭಗವಂತನ ಪೂಜೆ ಮಾಡಬೇಕಾದರೆ ಅದಕ್ಕೆ ಬೇಕಾಗುವ ಸಿದ್ಧತೆಗಳನ್ನು ಮಾಡಿಕೊಳ್ಳಲು ಬಹಳ ಸಮಯ ಹಿಡಿಯುತ್ತದೆ. ಹೂವು ಕೊಯ್ಯುವುದು. ಚಂದನ ಮಾಡಿಕೊಳ್ಳುವುದು. ಪೂಜಾ ಸಾಮಗ್ರಿಗಳನ್ನು ಬೆಳಗಿಕೊಳ್ಳುವುದು, ನೈವೇದ್ಯಕ್ಕೆ ಸಿದ್ಧತೆ ಮಾಡಿಕೊಳ್ಳುವುದು ಇವೇ ಮೊದಲಾದ ಕೆಲಸಗಳನ್ನು ಮಾಡುವಾಗಲೆಲ್ಲಾ ಮನಸ್ಸು ಭಗವಂತನ ಕಡೆಗೇ ಹರಿಯುತ್ತಿರುತ್ತದೆ. ಹೀನ ಬುದ್ಧಿ, ಕೋಪ, ದ್ವೇಷ ಇವೆಲ್ಲಾ ತೊಲಗಿಹೋಗುತ್ತದೆ. ಮಾತಾಡುವಾಗ ಭಗವಂತನ ವಿಷಯವಾಗಿಯೇ ಮಾತುಕತೆಗಳನ್ನಾಡಿ.

❁ ಮುಖ್ಯವಾಗಿ ಮಾಡಬೇಕಾದುದೇನೆಂದರೆ, ಹೇಗಾದರೂ ಮಾಡಿ ಮನಸ್ಸನ್ನು ಭಗವಂತನ ಕಡೆಗೆ ತಿರುಗಿಸಬೇಕು. ಒಮ್ಮೆಯೂ ಆತನನ್ನು ಮರೆಯಕೂಡದು. ಅದು ತೈಲಧಾರೆಯಂತೆ ಅವಿಚ್ಛಿನ್ನವಾಗಿರಬೇಕು. ಒಂದು ಇಟ್ಟಿಗೆಯನ್ನೇ ಆಗಲಿ ಒಂದು ಕಲ್ಲನ್ನೇ ಆಗಲಿ ಅದೇ ಭಗವಂತ ಎಂದು ಭಾವಿಸಿ ಶ್ರದ್ಧಾ ಭಕ್ತಿಯಿಂದ ಪೂಜಿಸುವುದಾದರೆ, ಭಗವಂತನ ಕೃಪೆಯಿಂದ ಅದರಿಂದಲೇ ಆತನ ದರ್ಶನ ದೊರೆತುಬಿಡುವ ಸಂಭವವಿದೆ.

❁ ಜನರಿಗೆ ಅನ್ನದಾನ ಮಾಡಿದರೆ ಒಂದು ರೀತಿಯಲ್ಲಿ ಭಗವಂತನ ಸೇವೆಯನ್ನೇ ಮಾಡಿದಂತಾಗುತ್ತದೆ. ಅಲ್ಲವೆ? ಎಲ್ಲಾ ಜೀವಿಗಳಲ್ಲಿಯೂ ಆತ ಅಗ್ನಿರೂಪದಲ್ಲಿ ಇದ್ದಾನೆ. ಜನರಿಗೆ ಅನ್ನ ಹಾಕುವುದು ಎಂದರೆ, ಅಂತರ್ಯಾಮಿಯಾಗಿರುವ ಆತನಿಗೆ ಅರ್ಪಿಸಿದಂತೆಯೇ.

ಶ್ರೀರಾಮಕೃಷ್ಣ ವಚನವೇದದಿಂದ

ಶ್ರೀಮಾತೆಯವರ ಸಾನ್ನಿಧ್ಯದಲ್ಲಿ

ಮೂಲ ಬಂಗಾಳಿ : **ಸ್ವಾಮಿ ನಿರ್ವಾಣಾನಂದ** ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

ಶ್ರೀಮಾತೆಯವರ ಮೇಲೆ ಅಪಾರ ಭಕ್ತಿ , ಗೌರವಗಳನ್ನು ಹೊಂದಿದ್ದ ಅನೇಕ ಮಂದಿ ಸಂನ್ಯಾಸಿ ಶಿಷ್ಯಂದಿರು ಅವರನ್ನು ಕುರಿತು ಬರೆದ ಹಲವು ಸ್ಮೃತಿಲೇಖನಗಳು ಪ್ರಕಟವಾಗಿವೆ. ೧೯೧೨ರ ನವೆಂಬರ್ ತಿಂಗಳ 'ಉದ್ಬೋಧನ'ದಲ್ಲಿ ಪ್ರಕಟವಾದ ಈ ಲೇಖನವು 'ಮಾಯೇರ್ ಪದಪ್ರಾಂತೇ' ಎಂಬ ಬಂಗಾಳಿ ಗ್ರಂಥದಲ್ಲಿ ಅಡಕವಾಗಿದೆ. ಶ್ರೀರಾಮಕೃಷ್ಣರ ಮಾನಸಪುತ್ರರೆಂದೇ ಪ್ರಸಿದ್ಧರಾಗಿದ್ದ ಸ್ವಾಮಿ ಬ್ರಹ್ಮಾನಂದರ ಸೇವಕರಾಗಿ ಅನೇಕ ವರ್ಷಗಳ ಕಾಲ ನಿಯುಕ್ತರಾಗಿದ್ದ ಲೇಖಕರು, ಮುಂದೆ ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಾಗಿದ್ದರು. ಆಧ್ಯಾತ್ಮಿಕವಾಗಿ ಅತ್ಯುನ್ನತ ಸ್ಥಿತಿಗೇರಿದ್ದ ಅವರು, ಈ ಸಂಕ್ಷಿಪ್ತ ಲೇಖನದಲ್ಲಿ ಶ್ರೀಮಾತೆಯವರ ಪುಣ್ಯಸ್ಮರಣೆಯನ್ನು ಮಾಡಿದ್ದಾರೆ.

ಶ್ರೀಮಾತೆಯವರನ್ನು ನಾನು ಮೊದಲ ಬಾರಿ ಭೇಟಿಯಾದದ್ದು ಕಾಶಿ ಸೇವಾಶ್ರಮದಲ್ಲಿ. ನನಗೆ ನೆನಪಿರುವಂತೆ ಅದು ಕ್ರಿ.ಶ. ೧೯೧೩ ನೇ ಇಸವಿಯ ನವಂಬರ್ ತಿಂಗಳ ಮೊದಲ ದಿನಗಳಲ್ಲಿ. ಕಾಳೀಪೂಜೆಯ ಮರುದಿನ ಶ್ರೀಮಾತೆ ಸೇವಾಶ್ರಮಕ್ಕೆ ಬಂದಿದ್ದರು.[೧] ನಾನು ರಾಮಕೃಷ್ಣ ಮಹಾಸಂಘವನ್ನು ಸೇರುವ ಉದ್ದೇಶದಿಂದ ಕೆಲವು ದಿನಗಳ ಮೊದಲಷ್ಟೇ ಅಲ್ಲಿಗೆ ಬಂದಿದ್ದೆ. ಅಲ್ಲಿಗೆ ಹೋಗುವ ಮೊದಲೇ ನಾನು 'ಶ್ರೀರಾಮಕೃಷ್ಣ ಕಥಾಮೃತ' (ವಚನವೇದ) ಹಾಗೂ ಇನ್ನಿತರ ಮೂಲಗಳಿಂದ ಶ್ರೀಮಾತೆಯವರ ಬಗ್ಗೆ ತಿಳಿದಿದ್ದೆ. ಮಹಾರಾಜ್ (ಸ್ವಾಮಿ ಬ್ರಹ್ಮಾನಂದರು) ಕೂಡ ಆಗ ಸೇವಾಶ್ರಮದಲ್ಲಿದ್ದರು. ಶ್ರೀಮಾತೆ ಆಗ ಅದ್ವೈತ ಆಶ್ರಮದ ಬಳಿ ಇದ್ದ, ಬಾಗ್‌ಬಜಾರ್ ನಿವಾಸಿಯಾದ ಕಿರಣ ದತ್ತನ 'ಲಕ್ಷ್ಮೀ ನಿವಾಸ' ಎಂಬ ಮನೆಯಲ್ಲಿ ತಂಗಿದ್ದರು. ಶ್ರೀಮಾತೆ ಬಂದ ದಿನವೇ ಸೇವಾಶ್ರಮದ ಚಟುವಟಿಕೆಗಳನ್ನೆಲ್ಲ ನೋಡಿ ಬಂದಿದ್ದರು. ಸೇವಾಶ್ರಮದಲ್ಲಿ ಸಾಧುಗಳು ರೋಗಿಗಳನ್ನು ಭಗವಂತನ ಸ್ವರೂಪವೆಂದೇ ಕಂಡು ಉಪಚರಿಸುತ್ತಿದ್ದುದನ್ನು ಕಂಡು ಶ್ರೀಮಾತೆ ಅತ್ಯಂತ ಆನಂದಗೊಂಡಿದ್ದರು. ಅವರು ಹೀಗೆಂದಿದ್ದರು: ''ಇಲ್ಲಿ ಸ್ವಯಂ ಶ್ರೀರಾಮಕೃಷ್ಣರೇ ರಾರಾಜಿಸುತ್ತಿದ್ದಾರೆ. ನನ್ನ ಮಕ್ಕಳು ಇಲ್ಲಿ ಪ್ರಾಣವನ್ನೇ ಪಣವನ್ನಾಗಿಟ್ಟುಕೊಂಡು ರೋಗಿಗಳ ಸೇವೆ ಮಾಡುವ ಮೂಲಕ ಶ್ರೀರಾಮಕೃಷ್ಣರ ಪೂಜೆಯನ್ನೇ ಮಾಡುತ್ತಿದ್ದಾರೆ.'' ಅವರು ಬಹಳ ಹೊತ್ತು ಸೇವಾಶ್ರಮದಲ್ಲಿ ಕಳೆದು 'ಲಕ್ಷ್ಮೀ ನಿವಾಸ'ಕ್ಕೆ ಮರಳಿದರು. ಸ್ವಲ್ಪ ಹೊತ್ತಿನ ನಂತರ ಶ್ರೀಮಾತೆ ಚಾರು ಮಹಾರಾಜರ (ಸ್ವಾಮಿ ಶುಭಾನಂದ) ಬಳಿಗೆ ಹತ್ತು ರೂಪಾಯಿ ನೋಟೊಂದನ್ನು ಸೇವಾಶ್ರಮಕ್ಕಾಗಿ ಕಳುಹಿಸಿಕೊಟ್ಟರು. ಚಾರು ಮಹಾರಾಜರು ಕಾಶಿ ಸೇವಾಶ್ರಮದ ಸಂಸ್ಥಾಪಕರಲ್ಲಿ ಒಬ್ಬರು. ಆಗಿನ್ನೂ ಅವರು ಸಂನ್ಯಾಸಿಯಾಗಿರಲಿಲ್ಲ. ಆಗ ಅವರು ಚಾರುಬಾಬು, ಅಥವಾ ಚಾರುಚಂದ್ರ ದಾಸ್ ಆಗಿದ್ದರಷ್ಟೆ. ಶ್ರೀಮಾತೆಯವರ ಹಣವನ್ನು ತಂದುಕೊಟ್ಟವನು ಹೇಳಿದ, ''ಶ್ರೀಮಾತೆ ಸೇವಾಶ್ರಮದ ಕೆಲಸಕಾರ್ಯಗಳನ್ನು ನೋಡಿ ತುಂಬ ಆನಂದಗೊಂಡಿದ್ದಾರೆ. ಅದಕ್ಕೆ ಅವರು ಈ ಹಣ

ವನ್ನು ಕಳುಹಿಸಿ ಕೊಟ್ಟಿದ್ದಾರೆ. ಅವರು ಮತ್ತೆ, 'ಸೇವಾಶ್ರಮವನ್ನು ನೋಡಿ ನನಗೆ ಎಷ್ಟೊಂದು ಹಿಡಿಸಿತೆಂದರೆ ಇಲ್ಲೇ ಶಾಶ್ವತವಾಗಿ ನೆಲೆಸಿಬಿಡೋಣ ಅನ್ನಿಸಿತು' ಎಂದರು.'' ಶ್ರೀಮಾತೆಯವರ ಈ ಮಾತನ್ನು ಕೇಳಿ ಸ್ವಾಮಿ ಬ್ರಹ್ಮಾನಂದರು, ಮಹಾಪುರುಷ್ ಮಹಾರಾಜ್ (ಸ್ವಾಮಿ ಶಿವಾನಂದರು), ಹರಿ ಮಹಾರಾಜ್ (ಸ್ವಾಮಿ ತುರೀಯಾನಂದರು), ಕೇದಾರ ಬಾಬಾ (ಸ್ವಾಮಿ ಅಚಲಾನಂದರು), ಚಾರು ಮಹಾರಾಜ್ ಮೊದಲಾದವರಿಗೆಲ್ಲ ಎಂಥ ಆನಂದವುಂಟಾಯಿತು! ಆಗ ಮಾಸ್ಟರ್ ಮಹಾಶಯ ಕೂಡ ಕಾಶಿಯಲ್ಲಿದ್ದರು.

೧ ಕ್ರಿ.ಶ.೧೯೧೩ರ ನವಂಬರ್ ೮ರಂದು.

ಅವರಿಗೆ ಸೇವಾಶ್ರಮದ ಕೆಲಸಕಾರ್ಯಗಳೆಲ್ಲ ಹಿಡಿಸುತ್ತಿರಲಿಲ್ಲ. ಅವರ ಪ್ರಕಾರ ರೋಗಿಗಳ ಸೇವೆ, ಆಸ್ಪತ್ರೆ ನಡೆಸುವುದು ಇವೆಲ್ಲ ಸಾಧುಸಂನ್ಯಾಸಿಗಳು ಮಾಡುವ ಕೆಲಸವಲ್ಲ. ಇವೆಲ್ಲ ಶ್ರೀರಾಮ ಕೃಷ್ಣರ ಆದರ್ಶಗಳಿಗೆ ವಿರುದ್ಧವಾದದ್ದು. ಸಾಧುಗಳು ಕೇವಲ ಸಾಧನೆ, ಭಜನೆಗಳಲ್ಲಿ ನಿರತರಾಗಿರಬೇಕು. ಶ್ರೀಮಾತೆ ಸೇವಾ ಶ್ರಮವನ್ನು ಭೇಟಿಯಾದ ನಂತರ ಅದನ್ನು ಕುರಿತು ಅವರು ವ್ಯಕ್ತ ಪಡಿಸಿದ ಅಭಿಪ್ರಾಯ ಹಾಗೂ ಅವರು ಹತ್ತು ರೂಪಾಯಿ ನೋಟನ್ನು ಕಳುಹಿಸಿಕೊಟ್ಟದ್ದನ್ನು ಉಲ್ಲೇಖಿಸಿ ಸ್ವಾಮಿ ಬ್ರಹ್ಮಾ ನಂದರು ಮಾಸ್ಟರ್ ಮಹಾಶಯರಿಗೆ, ''ಎಲ್ಲವನ್ನೂ ಕೇಳಿದಿರಿ ತಾನೆ?'' ಎಂದರು. ಅದಕ್ಕೆ ಮಾಸ್ಟರ್ ಮಹಾಶಯರು ಹೇಳಿ ದರು, ''ಶ್ರೀಮಾತೆಯವರೇ ಹಾಗೆ ಹೇಳಿರುವಾಗ ಬೇರೆ ಮಾತೇ ನಿದೆ? ಇದೆಲ್ಲವೂ ಖಂಡಿತ ಶ್ರೀರಾಮಕೃಷ್ಣರ ಕೆಲಸವೇ, ಅಲ್ಲ ವೆನ್ನುವುದಕ್ಕೆ ಮಾರ್ಗವೆಲ್ಲಿದೆ?'' ಎಂದರು.

ಶ್ರೀಮಾತೆ ಬಹಳ ದಿನ ಕಾಶಿಯಲ್ಲಿದ್ದರು. ನಡುನಡುವೆ ಅವರು ಅದ್ವೈತ ಆಶ್ರಮ ಹಾಗೂ ಸೇವಾಶ್ರಮಕ್ಕೆ ಹೋಗಿಬಂದು ಮಾಡುತ್ತಿದ್ದರು. ರಾಜಾ ಮಹಾರಾಜರು ಪ್ರತಿದಿನ ಬೆಳಿಗ್ಗೆ ಹೊತ್ತು ಶ್ರೀಮಾತೆಯವರಿಗೆ ಪ್ರಣಾಮ ಮಾಡಲು 'ಲಕ್ಷ್ಮೀ ನಿವಾಸ'ಕ್ಕೆ ಹೋಗುತ್ತಿದ್ದರು. ಅವರೊಂದಿಗೆ ಒಮ್ಮೊಮ್ಮೆ ನಾವೂ ಇರುತ್ತಿದ್ದೆವು. ಆಗ ನಾನು ಶ್ರೀಮಾತೆಯವರೊಂದಿಗೆ ಹೆಚ್ಚು ಮಾತುಕತೆ ನಡೆಸ ಲಾಗುತ್ತಿರಲಿಲ್ಲ ; ಆದರೂ ಅವರು ನನ್ನ ಮೇಲೆ ವಿಶೇಷ ಪ್ರೀತಿ ಯನ್ನು ಹೊಂದಿದ್ದುದರ ಸೂಚನೆ ನನಗೆ ಸಿಗುತ್ತಿತ್ತು. ೧೯೧೪ ನೇ ಇಸವಿಯ ಡಿಸೆಂಬರ್ ತಿಂಗಳ ಕೊನೆಯ ಭಾಗದಲ್ಲಿ ರಾಜಾ ಮಹಾರಾಜರ ಸೂಚನೆಯ ಮೇರೆಗೆ ನಾನು ಬೇಲೂರು ಮಠಕ್ಕೆ ಹೋದೆ. ಆಗ ಶ್ರೀಮಾತೆ 'ಉದ್ಬೋಧನ'ದಲ್ಲಿದ್ದರು. ಶ್ರೀಮಾತೆ ಯವರ ದರ್ಶನ ಪಡೆಯಲು ನಾನು 'ಉದ್ಬೋಧನ'ಕ್ಕೆ ಹೋದೆ. ನಾನು ಬೇಲೂರು ಮಠಕ್ಕೆ ಹೋಗುವ ಒಂದೆರಡು ತಿಂಗಳ ಮೊದಲು ನೆರೆ ಪರಿಹಾರ ಕಾರ್ಯಕ್ಕಾಗಿ ಕಾಶಿಯಿಂದ ಪಶ್ಚಿಮ ಬಂಗಾಳಕ್ಕೆ ಹೋಗಿದ್ದೆ. ಆಗ ಉಂಟಾದ ಅತಿಯಾದ ಪರಿಶ್ರಮ ಹಾಗೂ ಅನಿಯಮಿತವಾದ ದಿನಚರಿಯಿಂದಾಗಿ ಇರಬೇಕು, ನಾನು ದೈಹಿಕ ವಾಗಿ ದುರ್ಬಲನಾಗಿದ್ದೆ. ಶ್ರೀಮಾತೆಯವರ ಕಣ್ಣಿಗೆ ಇದು ಬೀಳ ದಿರಲಿಲ್ಲ. ಅವರು ನನ್ನನ್ನು ನೋಡುತ್ತಲೇ ಅತ್ಯಂತ ಉದ್ವಿಗ್ನರಾಗಿ ಆತಂಕದ ಧ್ವನಿಯಿಂದ ಕೇಳಿದರು: ''ಇದೇನು, ನಿನ್ನ ದೇಹಸ್ಥಿತಿ ಹೀಗಾಗಿದೆ?'' ನಾನಂದೆ, ''ಕೆಲವು ದಿನಗಳಿಂದ ನೆರೆ ಪರಿಹಾರ ಕಾರ್ಯದಲ್ಲಿ ತೊಡಗಿದ್ದೆ. ಅಲ್ಲಿ ಊಟ ಇತ್ಯಾದಿಗಳ ವ್ಯವಸ್ಥೆ ಅಷ್ಟು ಚೆನ್ನಾಗಿರಲಿಲ್ಲ. ಅದಕ್ಕೆ ಬಹುಶಃ ದೇಹಾರೋಗ್ಯ ತುಸು ಕೆಟ್ಟಿರಬೇಕು.'' ''ತುಸು ಏನಲ್ಲ, ಚೆನ್ನಾಗಿಯೇ ಕೆಟ್ಟುಹೋಗಿದೆ. ಸ್ವಲ್ಪ ದಿನ ಚೆನ್ನಾಗಿ ಊಟ, ತಿಂಡಿ ಮಾಡಿ ಒಳ್ಳೆಯ ಆರೋಗ್ಯವನ್ನು ಮತ್ತೆ ಸಂಪಾದಿಸು'' ಎಂದರು ಶ್ರೀಮಾತೆ. ''ನೀವು ಶ್ರೀರಾಮ ಕೃಷ್ಣರ ಕೆಲಸ ಎಷ್ಟೊಂದು ಮಾಡುವಿರಂತೆ? ದೇಹಾರೋಗ್ಯ ಚೆನ್ನಾಗಿಲ್ಲದಿದ್ದರೆ ಹೇಗೆ ನಡೆದೀತು?'' ಎಂದರು. ಬೇಲೂರು ಮಠಕ್ಕೆ ಹಿಂದಿರುಗುವಾಗ ಶ್ರೀಮಾತೆ ಮತ್ತೆ ಆ ವಿಷಯವನ್ನೇ ನೆನಪಿಸಿದರು. ಈ ಬಾರಿ ನಾನು ಬೇಲೂರು ಮಠದಲ್ಲಿ ಸ್ವಾಮಿ ಬ್ರಹ್ಮಾನಂದರ ಸೇವೆಗೆಂದು ಕೆಲವು ಸಮಯದ ಮಟ್ಟಿಗೆ ನಿಯುಕ್ತ ನಾಗಿದ್ದೆ. ಈ ವೇಳೆಗೆ ನನಗೆ ಉತ್ತರಾಖಂಡಕ್ಕೆ ಹೋಗಿ, ಕೆಲವು ದಿನ ತಪಸ್ಸು-ಸಾಧನೆಗಳಲ್ಲಿ ಕಳೆಯಬೇಕೆಂದು ಪ್ರಬಲ ಆಕಾಂಕ್ಷೆ ಉಂಟಾ ಯಿತು. ಶ್ರೀಮಾತೆಯವರು ಆಗ 'ಉದ್ಬೋಧನ'ದಲ್ಲಿದ್ದರು, ನಾನು ಅಲ್ಲಿಗೆ ಹೋಗಿ ಅವರಿಗೆ ನನ್ನ ಬಯಕೆಯನ್ನು ತಿಳಿಸಿ, ಅವರ ಅನುಮತಿಯನ್ನು ಬೇಡಿದೆ. ಶ್ರೀಮಾತೆ ಮೊದಮೊದಲು ಅದಕ್ಕೆ ಒಪ್ಪಲಿಲ್ಲ. ಅವರು ತುಂಬ ಕಳಕಳಿಯಾಗಿ ಹೇಳಿದರು, ''ಇಲ್ಲ ಮಗೂ, ನೀನಿನ್ನೂ ಹುಡುಗ. ಈಗ ನೀನು ತಪಸ್ಸು ಮಾಡಿ ಏನೂ ಪ್ರಯೋಜನವಿಲ್ಲ. ಅಲ್ಲಿಗೆ ಹೋಗಿ ನೀನೆಲ್ಲಿ ಇರುತ್ತೀಯಾ, ಊಟಕ್ಕೆ ಏನು ಮಾಡುತ್ತೀಯಾ ಹೇಳು?'' ನಾನು ಬಿಡುವವನಲ್ಲ, ಅವರ ಅಪ್ಪಣೆಗಾಗಿ ಬೇಡುತ್ತ ನಾನು ಕಾದು ನಿಂತೆ. ಮತ್ತೆ ಶ್ರೀಮಾತೆ ಹೇಳಿದರು, ''ಇಲ್ಲ ಮಗೂ, ನಿನಗೆ ಕಷ್ಟವಾಗಬಹುದು. ನೀನು ತಪಸ್ಸಿಗಾಗಿ ಹೋಗಬೇಕಾದ ಅಗತ್ಯವಿಲ್ಲ ನೋಡು.'' ಶ್ರೀಮಾತೆಯವರ ಕಂಠದಿಂದ ಹೊರಬಂದ ಮಾತುಗಳಲ್ಲಿ ವ್ಯಾಕುಲತೆಗಳಿದ್ದವು. ಆದರೆ ನಾನು ಹಠ ಬಿಡಲಿಲ್ಲ. ಹಲವು ಬಾರಿ ನಾನು ಪ್ರಾರ್ಥಿಸುತ್ತಲೇ ಇದ್ದೆ; ಕೊನೆಗೂ ಅವರು ನನಗೆ ಅನುಮತಿ ನೀಡಬಹುದೆಂದು. ಕೊನೆಗೆ ಶ್ರೀಮಾತೆ ಹೇಳಿದರು, ''ಸರಿ ಮಗೂ, ನೀನು ತಪಸ್ಸು ಮಾಡಲು ಅಷ್ಟೊಂದು ವ್ಯಾಕುಲ ನಾಗಿದ್ದರೆ, ಕಾಶಿಗೆ ಹೋಗಿಬಿಡು. ಅಲ್ಲಿ 'ಸೇವಾಶ್ರಮ'ದಲ್ಲಿ ಇದ್ದುಕೊಂಡು, ಹೊರಗೆ ಭಿಕ್ಷಾಟನೆ ಮಾಡು. ಬೇರೆಲ್ಲಿಗೂ ಹೋಗ ಬೇಡ.'' ಆಗ ನಾನು ಶ್ರೀಮಾತೆಯವರಿಗೆ ಹೇಳಿದೆ, ''ಅಮ್ಮಾ ಹಾಗಿದ್ದರೆ ನಾನು ಕಾಶಿಗೆ ನಡೆದೇ ಹೋಗುತ್ತೇನೆ.'' ಮೊದಲು ಅದಕ್ಕೆ ಒಪ್ಪಲಿಲ್ಲ ಶ್ರೀಮಾತೆ. ಅನಂತರ ಅವರು ನನ್ನ ಪ್ರಾರ್ಥನೆಗೆ ಮಣಿದು, ಅದಕ್ಕೊಪ್ಪಿದರು. ಶ್ರೀಮಾತೆಯವರನ್ನು ಬೀಳ್ಕೊಳ್ಳು ವಾಗ ಅವರು ನನ್ನ ತಲೆಯ ಮೇಲೆ ಕೈಯಿಟ್ಟು ಹೇಳಿದರು, ''ನಿನಗೆ ಚೆನ್ನಾಗಿ ಆಶೀರ್ವಾದ ಮಾಡುತ್ತೇನೆ, ಮಗೂ. ನಿನಗೆ ಸಿದ್ಧಿಯುಂಟಾಗಲಿ.'' ತಿಂಗಳ ನಂತರ ಶ್ರೀಮಾತೆಯವರ ಆಶೀ ರ್ವಾದದೊಂದಿಗೆ ನಾನು ಪಾದಚಾರಿಯಾಗಿ ಕಾಶಿಗೆ ಹೊರಟೆ. ಈ ಬಾರಿ ನಾನು ಏಳೆಂಟು ತಿಂಗಳು ಕಾಶಿಯಲ್ಲಿದ್ದೆ. ಅಲ್ಲಿಂದ ಬೇಲೂರು ಮಠಕ್ಕೆ ಹಿಂತಿರುಗಿದ ಬಳಿಕ ಮತ್ತೆ ಸ್ವಾಮಿ ಬ್ರಹ್ಮಾ ನಂದರ ಸೇವೆಗಾಗಿ ನಿಯುಕ್ತನಾದೆ.

ಸ್ವಾಮಿ ಬ್ರಹ್ಮಾನಂದರು ಬಲರಾಮ ಮಂದಿರದಲ್ಲಿ[೨] ತಂಗು ವುದನ್ನು ಇಷ್ಟಪಡುತ್ತಿದ್ದರು. ಸಾಮಾನ್ಯವಾಗಿ ಅವರು ಬೇಲೂರು ಮಠದಿಂದ ಬಲರಾಮ ಮಂದಿರಕ್ಕೆ ಬರುತ್ತಿದ್ದರು. ಬಲರಾಮ ಮಂದಿರದಲ್ಲಿ ರಾಜಾ ಮಹಾರಾಜರೊಂದಿಗೆ ಇರಬೇಕಾಗಿದ್ದ

೨ ಶ್ರೀರಾಮಕೃಷ್ಣರ ಗೃಹೀ ಭಕ್ತರಲ್ಲಿ ಪ್ರಮುಖನಾದ ಬಲರಾಮ ಬಸುವಿನ ಮನೆಯೇ 'ಬಲರಾಮ ಮಂದಿರ'. ಶ್ರೀರಾಮಕೃಷ್ಣರು ಅನೇಕ ಬಾರಿ ಅಲ್ಲಿಗೆ ಭೇಟಿ ನೀಡಿದ್ದರು. ಸ್ವಾಮೀಜಿ, ಬ್ರಹ್ಮಾನಂದರೇ ಮೊದಲಾದ ಶ್ರೀರಾಮಕೃಷ್ಣರ ಸಂನ್ಯಾಸಿ ಶಿಷ್ಯಂದಿರು ಅಲ್ಲಿ ಹಲವು ಬಾರಿ ತಂಗಿದ್ದರು ಹಾಗೂ ತಪಸ್ಸು, ಸಾಧನೆ ಗಳಲ್ಲಿ ನಿರತರಾಗಿದ್ದರು. *(-ಅನು.)*

ಕಾರಣದಿಂದ ಸಾಮಾನ್ಯವಾಗಿ ನಾನು 'ಉದ್ಬೋಧನ'ಕ್ಕೆ ಹೋಗುತ್ತಿದ್ದೆ.[೩] ಆದ್ದರಿಂದ ಬಹುತೇಕ ಪ್ರತಿದಿನವೂ ನನಗೆ ಶ್ರೀಮಾತೆಯವರ ದರ್ಶನ, ಪ್ರಣಾಮ ಮಾಡುವ ಸೌಭಾಗ್ಯ ದೊರಕುತ್ತಿತ್ತು. ಅವರೊಂದಿಗೆ ಆಗಾಗ ಮಾತುಕತೆಯನ್ನು ಆಡುತ್ತಿದ್ದೆ. ಶ್ರೀಮಾತೆಯವರ ಕಂಠ ತುಂಬ ಮಧುರವಾಗಿತ್ತು. ಇತರರೆದುರು ಸಾಮಾನ್ಯವಾಗಿ ಅವರು ದೀರ್ಘವಾದ ಅವಗುಂಠನ ಹಾಕಿಕೊಂಡೇ ಮುಖ ಮರೆಸಿಕೊಂಡಿರುತ್ತಿದ್ದರು; ಆದರೆ ನಾನು ಎಂದಿಗೂ ಅವರನ್ನು ಆ ರೀತಿ ಕಂಡ ನೆನಪಿಲ್ಲ. ನಾನು ಶ್ರೀಮಾತೆಯವರನ್ನು ಕಂಡಾಗಲೆಲ್ಲ ನನಗೆ ಅವರ ಶ್ರೀಮುಖದ ದರ್ಶನಭಾಗ್ಯ ಲಭಿಸುತ್ತಿತ್ತು.

ಶ್ರೀಮಾತೆಯವರ ಕೊನೆಗಾಲದಲ್ಲಿ ಉಂಟಾದ ಅನಾರೋಗ್ಯದ ಸಂದರ್ಭದಲ್ಲಿ ಸ್ವಾಮಿ ಬ್ರಹ್ಮಾನಂದರು ಭುವನೇಶ್ವರದಲ್ಲಿದ್ದರು. ಅವರ ಸೇವೆಗಾಗಿ ನಾನು ಅಲ್ಲೇ ಇದ್ದೆ. ಶ್ರೀಮಾತೆಯವರು ಮಹಾಸಮಾಧಿಯನ್ನು ಹೊಂದಿದ ದಿನ (೧೯೨೦ರ ಜುಲೈ ೨೧ರ ಮಂಗಳವಾರದಂದು) ರಾತ್ರಿ ಸುಮಾರು ೧.೩೦ ಗಂಟೆಯ ಹೊತ್ತಿಗೆ ರಾಜಾ ಮಹಾರಾಜರ ಕೋಣೆಯನ್ನು ಹೊಕ್ಕು ನೋಡಿದೆ — ಅವರು ಒಂದು ಉಣ್ಣೆಯ ಶಾಲಿನಿಂದ ದೇಹವನ್ನೆಲ್ಲ ಮುಚ್ಚಿ ಆರಾಮ ಕುರ್ಚಿಗೊರಗಿ ಕುಳಿತಿದ್ದರು. ಅವರ ಮುಖ ಗಂಭೀರವಾಗಿತ್ತು. ಅವರು ನನ್ನನ್ನು ನೋಡಿ ಹೇಳಿದರು, ''ಸೂರ್ಯ[೪], ರಾತ್ರಿ ಎಷ್ಟು ಗಂಟೆ ಈಗ? ಯಾಕೋ ಗೊತ್ತಿಲ್ಲ, ಶ್ರೀಮಾತೆಯವರಿಗೋಸ್ಕರ ಮನಸ್ಸು ತುಂಬ ಕಾತರಗೊಂಡಿದೆ. ಅವರು ಹೇಗಿದ್ದಾರೋ — ಯಾರಿಗೆ ಗೊತ್ತು?'' ನಾನು ಅವರನ್ನು ಕೇಳಿದೆ, ''ನೀವು ಮಲಗುವುದಿಲ್ಲವೆ?'' ಅದಕ್ಕೆ ಮಹಾರಾಜರು ಏನನ್ನೂ ಹೇಳಲಿಲ್ಲ. ಮಹಾರಾಜರ ಗಂಭೀರ ಮುಖಭಾವವನ್ನು ಹಾಗೂ ಶ್ರೀಮಾತೆಯವರನ್ನು ಕುರಿತು ಅವರ ಮನಸ್ಸು ಖಿನ್ನವಾದದ್ದನ್ನು ಕಂಡು, ಅವರ ಮನಸ್ಸನ್ನು ತುಸು ಹಗುರಗೊಳಿಸುವ ಸಲುವಾಗಿ ನಾನು ಕೇಳಿದೆ, ''ತಂಬಾಕು ತಯಾರುಮಾಡಿ ಕೊಡಲೆ?'' ಮಹಾರಾಜರು ಅದಕ್ಕೆ ಯಾವ ಪ್ರತಿಕ್ರಿಯೆಯನ್ನೂ ನೀಡದೆ, ಅದೇ ಭಾವದಲ್ಲಿ ಕುಳಿತಿದ್ದರು. ಅವರು ಹಾಗೆಯೇ ಕುಳಿತಿದ್ದನ್ನು ಕಂಡು ಅವರ ಬಳಿ ಇನ್ನೇನನ್ನೂ ಕೇಳುವ ಧೈರ್ಯ ನನಗಾಗಲಿಲ್ಲ. ಮೆಲ್ಲಮೆಲ್ಲನೆ ನಾನು ಅವರ ಕೋಣೆಯಿಂದ ಹೊರಬಂದೆ. ಮರುದಿನ ಬೆಳಿಗ್ಗೆ ರಾಜಾ ಮಹಾರಾಜರು ತುಸು ಅಧೀರರಾಗಿದ್ದಂತೆ ಕಂಡು ಬಂತು. ಬೇರೆ ದಿನಗಳಲ್ಲಿ ಅವರು ಬೆಳಗಿನ ಹೊತ್ತು ತುಸು ತಿರುಗಾಡಲು ಹೋಗುತ್ತಿದ್ದರು. ಆದರೆ ಇಂದು ಹೋಗಲಿಲ್ಲ. ಎದುರಿನ ಅಂಗಳದಲ್ಲೇ ಶತಪಥ ಹಾಕಲು ಆರಂಭಿಸಿದರು. ಅಂದೇ ಅಂಚೆ ಕಛೇರಿಯಿಂದ ಒಬ್ಬ ಪೇದೆ ಒಂದು ಟೆಲಿಗ್ರಾಂ ತಂದುಕೊಟ್ಟ. ಅದನ್ನು ಶರತ್ ಮಹಾರಾಜರು (ಸ್ವಾಮಿ ಶಾರದಾನಂದರು) ಕಳುಹಿಸಿದ್ದರು : ಹಿಂದಿನ ರಾತ್ರಿ ಸುಮಾರು ೧.೩೦ ಗಂಟೆಯ ಹೊತ್ತಿಗೆ ಶ್ರೀಮಾತೆ ದೇಹತ್ಯಾಗ ಮಾಡಿದರು ಎಂಬುದಾಗಿ. ನನಗೆ ನೆನಪಾಯಿತು — ಹಿಂದಿನ ರಾತ್ರಿ ಸುಮಾರು ಅದೇ ಸಮಯಕ್ಕೆ ರಾಜಾ ಮಹಾರಾಜ್ ನಿದ್ದೆಯಿಂದೆದ್ದು ಕುಳಿತು, 'ಶ್ರೀಮಾತೆಯವರ ಬಗ್ಗೆ ನನ್ನ ಮನಸ್ಸು ತುಂಬ ಕಾತರಗೊಂಡಿದೆ' ಎಂದು ಹೇಳಿದ್ದರು. ಸುದ್ದಿ ತಿಳಿದ ರಾಜಾ ಮಹಾರಾಜರ ಮುಖ ಒಂದು ಬಗೆಯ ಹೇಳಲಾರದ ನೋವಿನಿಂದ ಕಂಪಿಸಿತು. ಅವರು ಮಲಗಿಕೊಂಡರು. ಸ್ವಲ್ಪ ಹೊತ್ತಿನ ನಂತರ ಎದ್ದು ಕುಳಿತು ಹೇಳಿದರು, ''ನಾನು ಹವಿಷ್ಯಾನ್ನ ಊಟ ಮಾಡುತ್ತೇನೆ. ಶ್ರೀಮಾತೆಯವರ ಶಿಷ್ಯಂದಿರೆಲ್ಲ ಮೂರು ದಿನ ಹವಿಷ್ಯಾನ್ನ ಊಟಮಾಡಲಿ, ಬರಿಗಾಲಲ್ಲಿ ನಡೆಯಲಿ'' ಎಂದರು. ಮೂರು ದಿನ ಅವರು ಯಾರೊಂದಿಗೂ ಮಾತನಾಡಲಿಲ್ಲ. ಹನ್ನೆರಡು ದಿನ ಅವರು ಹವಿಷ್ಯಾನ್ನದಲ್ಲಿದ್ದರು ಹಾಗೂ ಬರಿಗಾಲಲ್ಲೇ ಓಡಾಡುತ್ತಿದ್ದರು. ಒಂದು ದಿನ ಅವರು ಹೇಳಿದರು — ''ಇಷ್ಟು ದಿನ ನಾವು ಪರ್ವತದ ನೆರಳಲ್ಲೇ ಇದ್ದೆವು.''

ಶ್ರೀಮಾತೆಯವರ ದೇಹವನ್ನು ಚಿತೆಯಲ್ಲಿ ದಹಿಸಿದ ನಂತರ ಮಹಾಪುರುಷ್ ಮಹಾರಾಜರು ನೆರೆದಿದ್ದ ಸಾಧು, ಭಕ್ತರ ಮುಂದೆ ಹೀಗೆಂದಿದ್ದರಂತೆ: ''ಸತಿಯ ದೇಹದ ಒಂದೊಂದು ಅಂಗ ಈ ದೇಶದ ಐವತ್ತೊಂದು ಸ್ಥಳಗಳಲ್ಲಿ ಬಿದ್ದು, ಅಲ್ಲೆಲ್ಲ ಒಂದೊಂದು ಶಕ್ತಿ ಪೀಠಗಳು ಉದ್ಭವಗೊಂಡವು. ಅದೇ ಸತಿಯ ಇಡೀ ದೇಹ ಇಂದು ಬೇಲೂರು ಮಠದ ಮಣ್ಣಿನಲ್ಲಿ ಸೇರಿ ಹೋಯಿತು. ಇದರಿಂದ ತಿಳಿದುಕೋ, ಬೇಲೂರು ಮಠ ಎಂಥ ಮಹಾತೀರ್ಥ!''

ಬೇಲೂರು ಮಠದಲ್ಲಿ ಗಂಗಾನದಿಯ ತೀರದಲ್ಲಿ ಮೂರು ಮಂದಿರಗಳಿವೆ (ಸ್ವಾಮಿ ಬ್ರಹ್ಮಾನಂದರದು, ಶ್ರೀಮಾತೆಯವರದು ಹಾಗೂ ಸ್ವಾಮೀಜಿಯವರದು). ಇವುಗಳ ನಡುವೆ ಶ್ರೀಮಾತೆಯವರ ಮಂದಿರ ಮಾತ್ರ ಗಂಗೆಗೆ ಎದುರಾಗಿ ನಿಂತಿದೆ. ಹೀಗೆ ಅದು ಉಳಿದ ಎರಡಕ್ಕಿಂತ ಭಿನ್ನ. ಶ್ರೀಮಾತೆಯವರಿಗೆ ಗಂಗೆ ಯೆಂದರೆ ಪಂಚಪ್ರಾಣ. ಗಂಗಾಸ್ನಾನ, ಗಂಗಾದರ್ಶನ, ಗಂಗಾತೀರದಲ್ಲಿ ವಾಸ ಎಂದರೆ ಅವರಿಗೆ ಅತ್ಯಂತ ಪ್ರೀತಿ. ಆದ್ದರಿಂದಲೇ ಶ್ರೀಮಾತೆಯವರ ಮಂದಿರ ಗಂಗೆಗೆ ಅಭಿಮುಖವಾಗಿದೆ. ಶ್ರೀಮಾತೆ ಸದಾ ಗಂಗಾದರ್ಶನ ಮಾಡುತ್ತಲೇ ಇರುತ್ತಾರೆ.

ರಾಜಾ ಮಹಾರಾಜರು ಹೇಳುತ್ತಿದ್ದರು, ''ಶ್ರೀಮಾತೆಯವರನ್ನು ಅರಿತುಕೊಳ್ಳುವುದು ತುಂಬಾ ಕಷ್ಟ. ಸಾಮಾನ್ಯ ಹೆಂಗಸರಂತೆ ಅವರು ಮುಖದ ಮೇಲೆ ಸೆರಗೆಳೆದುಕೊಂಡು ಇರುತ್ತಿದ್ದರು. ಆದರೆ ಅವರು ಸಾಕ್ಷಾತ್ ಜಗನ್ಮಾತೆ. ಶ್ರೀರಾಮಕೃಷ್ಣರೇ ಅವರನ್ನು ಅರಿತುಕೊಳ್ಳುವಂತೆ ಮಾಡದಿರುತ್ತಿದ್ದರೆ ನಮಗೆ ಅವರನ್ನು ತಿಳಿಯಲು ಎಂದಾದರೂ ಸಾಧ್ಯವಿತ್ತೆ?'' ಒಬ್ಬ ಭಕ್ತರು ನನಗೊಮ್ಮೆ ಹೇಳಿದರು, ಅವರಿಗೆ ಶ್ರೀಮಾತೆ ಸ್ವತಃ ತಾವೇ ಹೇಳಿದ್ದರಂತೆ — ''ನಾನೇ ಸೀತೆ'' ಎಂಬುದಾಗಿ.

---

೩. 'ಬಲರಾಮ ಮಂದಿರ'ದ ಸಮೀಪದಲ್ಲೇ 'ಉದ್ಬೋಧನ' ಅಥವಾ ಶ್ರೀಮಾತೆಯವರ ಮನೆ ಇದೆ. *(–ಅನು.)*

೪ ಲೇಖಕರ ಪೂರ್ವಾಶ್ರಮದ ಹೆಸರು. *(–ಅನು.)*